# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 642**
**ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.**
**(ವಿಧಾನಸಭೆಯಿಂದ ಚುನಾಯಿತರಾದವರು)**
**ಉತ್ತರಿಸಬೇಕಾದ ದಿನಾಂಕ : 12.03.2025**
**ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

| ಕ್ರ ಸಂ | ಪ್ರಶ್ನೆ | ಉತ್ತರಗಳು |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕಿನ ಕೊಯ್ಲಾದಲ್ಲಿನ ಪಶುಸಂಗೋಪನಾ ಕಾಲೇಜಿನಲ್ಲಿ ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭಗೊಂಡಿವೆಯೇ. | ಇಲ್ಲ |
| ಆ) | ಪ್ರಾರಂಭಗೊಂಡಿದ್ದಲ್ಲಿ, ಸದರಿ ಕಾಲೇಜಿಗೆ ಬೇಕಾಗಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಈಗಾಗಲೇ ಒದಗಿಸಲಾಗಿದೆಯೇ: | ಭಾರತೀಯ ಪಶುವೈದ್ಯಕೀಯ ಪರಿಷತ್ತಿನ ನಿಯಮಾವಳಿ 2016ರ ರನ್ವಯ ಪಶುವೈದ್ಯಕೀಯ ಮಹಾವಿದ್ಯಾಲಯ ಪ್ರಾರಂಭಿಸಬೇಕಾದರೆ ಅಗತ್ಯವಿರುವ ಕಟ್ಟಡ, ಮೂಲಭೂತ ಸೌಕರ್ಯ ಮತ್ತು ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ. ಈ ನಿಟ್ಟಿಯಲ್ಲಿ ಮೊದಲನೆ ಹಂತದಲ್ಲಿ ಪಶುವೈದ್ಯಕೀಯ ಮಹಾವಿದ್ಯಾಲಯದ ಕಟ್ಟಡ, ಆಸ್ಪತ್ರೆ, ಅತಿಥಿ ಗೃಹ, ವಿದ್ಯಾರ್ಥಿನಿಯರ ವಸತಿ ನಿಲಯದ ಕಾಮಗಾರಿ ಪೂರ್ಣಗೊಂಡಿದ್ದು, ಕರ್ನಾಟಕ ಗೃಹ ಮಂಡಳಿ ಬೆಂಗಳೂರು ವತಿಯಿಂದ ಜೂನ್ 2023 ರಲ್ಲಿ ವಿಶ್ವವಿದ್ಯಾಲಯಕ್ಕೆ ಹಸ್ತಾಂತರ ಮಾಡಲಾಗಿದೆ. ಅಲ್ಲದೆ ವಿದ್ಯಾರ್ಥಿಗಳ ಪ್ರಾಯೋಗಿಕ ಬೋಧನೆಗೆ ಬೇಕಾಗಿರುವ ಶವ ಪರೀಕ್ಷೆ ಕೊಠಡಿ, ಕಸಾಯಿಖಾನೆ, ಪ್ರಯೋಗಶಾಲೆ, ಸಣ್ಣ ಪ್ರಾಣಿಗಳ ಮನೆ, ಒಳ ರೋಗಿಗಳ ವಾರ್ಡ್, ಪ್ರತ್ಯೇಕತೆ ಕೊಠಡಿ, ಆವರಣದ ರಸ್ತೆಗಳು, ವಿದ್ಯುತ್ ಸರಬರಾಜು, ಇತ್ಯಾದಿಗಳನ್ನು ಅತಿ ಅವಶ್ಯವಿರುವ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುತಿದೆ.<br><br>ಭಾರತೀಯ ಪಶುವೈದ್ಯಕೀಯ ಪರಿಷತ್ತಿನ ನಿಯಮ ಪ್ರಕಾರ ಕಾಲೇಜು ಪ್ರಾರಂಭ ಮಾಡಲು ಮೊದಲ ವರ್ಷದ ವಿಭಾಗಗಳು, ಆಸ್ಪತ್ರೆ ಹಾಗೂ ಫಾರಂಗಳು ಕಾಲೇಜಿನಡಿಯಲ್ಲಿರಬೇಕಾಗುತ್ತದೆ. ಅದರಂತೆ 25 ತಾಂತ್ರಿಕ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ. ಅಲ್ಲದೆ 37 ಜನ ಬೋಧಕೇತರ ನೌಕರರನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳುವ ಪ್ರಕ್ರಿಯೆ ಜಾರಿಯಲ್ಲಿದೆ. ಕೊಯಿಲಾದಲ್ಲಿರುವ ಪಶುಪಾಲನಾ ಇಲಾಖೆಯ ಜಾನುವಾರು ಸಂವರ್ಧನಾ ಕೇಂದ್ರದ ಫಾರಂಗಳನ್ನು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸುವ ಪ್ರಸ್ತಾವನೆ ಸರ್ಕಾರಕ್ಕೆ ಸ್ವೀಕೃತಗೊಂಡಿರುತ್ತದೆ. |

| | | |
|---|---|---|
| ಇ) | ಒದಗಿಸದಿದ್ದಲ್ಲಿ, ಇನ್ನೂ ಒದಗಿಸಲು ಬಾಕಿ ಉಳಿದಿರುವ ಮೂಲಭೂತ ಸೌಕರ್ಯಗಳಿಗೆ ಹಾಗೂ ಬೇಕಾಗಿರುವ ಅನುದಾನವೆಷ್ಟು; ಉಳಿದಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿಗುವುದು? | ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕಿನ ಕೊಯ್ಲಾದಲ್ಲಿನ ಪಶುವೈದ್ಯಕೀಯ ಕಾಲೇಜಿಗೆ ಆದೇಶ ಸಂಖ್ಯೆ:ಪಸಂಮೀ ಇ-25 ಪಅಸೇ 2021, ದಿನಾಂಕ:16-03-2024 ರನ್ವಯ ರೂ.163.75 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಎರಡು ಭಾಗಗಳ ಕಾಮಗಾರಿಗಳಿಗಾಗಿ ರೂ. 99.30 ಕೋಟಿಗಳಲ್ಲಿ ಗ್ರಂಥಾಲಯ, ರಸ್ತೆಗಳು, ಸಿಬ್ಬಂದಿ ವಸತಿ, ಪ್ರಯೋಗಾಲಯ ಸಲಕರಣೆಗಳು, ಪೀಠೋಪಕರಣಗಳು ಇತ್ಯಾದಿ ಹಾಗೂ ಎರಡನೇ ಭಾಗವಾಗಿ ರೂ. 64.65 ಕೋಟಿಗಳಲ್ಲಿ ರೈತ ತರಬೇತಿ ಕೇಂದ್ರ, ವಿದ್ಯಾರ್ಥಿಗಳ ಸಭಾಂಗಣ, ಡೀನ್ ರವರ ವಸತಿ ಇತ್ಯಾದಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಗದಗ ಮತ್ತು ಅಥಣಿ ವಿಶ್ವವಿದ್ಯಾಲಯಗಳ ಕಾಮಗಾರಿಗೆ ಸಂಬಂಧಿಸಿದಂತೆ ಕಾಮಗಾರಿಗಳು ಮುಕ್ತಾಯವಾಗಿ ಸದರಿ ಬಿಲ್ಲುಗಳ ಪಾವತಿಗೆ ಮೊದಲ ಆದ್ಯತೆಯನ್ನು ನೀಡುವಂತೆ ಹಾಗೂ ತದನಂತರ ಪ್ರಸ್ತುತ ಚಾಲ್ತಿಯಲ್ಲಿರುವ ಕಾಮಗಾರಿಗಳಿಗೆ ಅನುದಾನವನ್ನು ಬಳಸಿಕೊಳ್ಳಲು ಆದ್ಯತೆ ನೀಡುವಂತೆ ಆರ್ಥಿಕ ಇಲಾಖೆಯು ತಿಳಿಸಿರುತ್ತದೆ. |
| ಈ) | ಯಾವ ಕಾಲಮಿತಿಯೊಳಗೆ ಬಾಕಿ ಉಳಿದಿರಲು ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು? | ಮೂಲಭೂತ ಸೌಕರ್ಯಗಳು ಪೂರ್ಣಗೊಂಡ ನಂತರ ಹಾಗೂ ಅವಶ್ಯಕವಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಭರ್ತಿಯಾದ ನಂತರ ಸದರಿ ಮಹಾವಿದ್ಯಾಲಯಕ್ಕೆ ಪರೀವೀಕ್ಷಣೆಗೆ ಭಾರತೀಯ ಪಶುವೈದ್ಯಕೀಯ ಪರಿಷತ್ತು ನವದೆಹಲಿ ಇವರಿಗೆ ಪತ್ರ ಬರೆಯಲಾಗುವುದು. ಸದರಿ ಪಶುವೈದ್ಯಕೀಯ ಪರಿಷತ್ತಿನ ತಂಡವು ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ಅನುಮತಿ ನೀಡಿದ ನಂತರ ಮಹಾವಿದ್ಯಾಲಯಕ್ಕೆ ಪ್ರವೇಶಾವಕಾಶ ಕಲ್ಪಿಸಲಾಗುವುದು. |

**ಸಂಖ್ಯೆ:ಪಸಂಮೀ 69 ಪಅಸೇ 2025**

**ಕೆ. ವೆಂಕಟೇಶ್**
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು